**ಅಸಲು ದಾವೆ ಸಂಖ್ಯೆ.73/2016**
**ಡಿ.ಡಬ್ಲ್ಯು:1**

**ದಿನಾಂಕಃ03.11.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಪರ ಶ್ರೀ. ಎಸ್.ಎನ್.ಜಿ ವಕೀಲರಿಂದಃ-**

ನಮ್ಮ ಕುಟುಂಬಕ್ಕೆ ಸರ್ವೆ ನಂಬರ್ 2 ರಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ನಮ್ಮ ಪೂರ್ವಜರಾಗಲೀ ನಾವಾಗಲೀ ಸರ್ವೆ ನಂಬರ್ 2 ರ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಮಗೆ ಸೇರಿದ ಎರಡು ಎಕರೆ 22 ಗುಂಟೆಯ ಆಸ್ತಿಯ ದಕ್ಷಿಣಕ್ಕೆ ದಾವಾ ಸ್ವತ್ತು ಬರುತ್ತದೆ. ದಾವಾ ಆಸ್ತಿಯಲ್ಲಿ ನಮಗೆ ಹಕ್ಕು ಹಿತಾಸಕ್ತಿ ಇರುವುದಿಲ್ಲ. ದಾವಾ ಸ್ವತ್ತಿನ ಉತ್ತರದಿಕ್ಕಿನಲ್ಲಿ ವಾದಿಗೆ ಸೇರಿದ 11 ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2015 ನೇ ಸಾಲಿನಲ್ಲಿ ಸರ್ವೆ ಇಲಾಖೆಯವರು ಅಳತೆ ಮಾಡಿದಾಗ ನಾವು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುತ್ತೇವೆ ಎಂದು ಗೊತ್ತಾಗಿ ವಾದಿಯು ತನ್ನ ಆಸ್ತಿಯನ್ನು ಬಿಟ್ಟುಕೊಡುವಂತೆ ಕೋರಿದ್ದರು ಎಂದರೆ ಸರಿಯಲ್ಲ. ಸರ್ವೆ ಇಲಾಖೆಯವರು ಅಳತೆ ಮಾಡುವ ಕಾಲಕ್ಕೆ ನನಗೆ ನೋಟೀಸ್ ನೀಡಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ನಾನು ಸದರಿ ನೋಟೀಸ್ ನ್ನು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟೀಸ್ ನ್ನು ಸ್ವೀಕರಿಸಲು ನಿರಾಕರಿಸಿದ ಕಾರಣ ನಮ್ಮ ಕುಟುಂಬದ ಇತರೆ ಸದಸ್ಯರಿಗೆ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ನಮಗೆ ಸೇರಿದ ಸರ್ವೆ ನಂಬರ್ 1 ಪಿ1 ಪೋಡು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಸದಸ್ಯರು ವಿಭಾಗಮಾಡಿಕೊಳ್ಳುವ ಕಾಲಕ್ಕೆ ಆಸ್ತಿಗಳನ್ನು ಅಳತೆ ಮಾಡಿಸಿರುವುದಿಲ್ಲ. ಸರ್ವೆ ನಂಬರ್ 2 ರಲ್ಲಿ ಸ್ಮಶಾನಕ್ಕೆ ಸೇರಿದ ಆಸ್ತಿ ಇರುವುದಿಲ್ಲ ಆದರೆ ಗುಂಡುತೋಪು ಮತ್ತು ದೇವಸ್ಥಾನ ಇರುತ್ತದೆ. ಸರ್ವೆ ನಂಬರ್ 2 ರಲ್ಲಿ ಒಟ್ಟು 1 ಎಕರೆ 35 ಗುಂಟೆ ಜಮೀನು ಇರುತ್ತದೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಸೇರಿದ 11 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೂ ಸಹ ಒತ್ತುವರಿ ಮಾಡಿಕೊಂಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.